Regd No. M.1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 26] ಮಂಗಳವಾರ 28—10—47 [ಬಿಡಿ ಪ್ರತಿ ಪೈ

ಪ್ರಜೆಗಳಿಗಾಗಿ ರಾಜನಿರುವನೇ? ರಾಜನಿಗಾಗಿ ಪ್ರಜೆಗಳಿರುವರೇ!?

'ಡಿವೈನ್ ರೈಟ್ ಥಿಯರಿ' ಅಂದರೆ ದೇವರಿಂದಲೇ ಹಕ್ಕನ್ನು ಪಡೆದಿರುವವರು ರಾಜರೆಂಬ ವಿಷಯ. ಯೂರೋಪು ಖಂಡದಲ್ಲಿ ಇದು ಒಗೆಬಗೆ ಹೋರಾಟ ಸೃಷ್ಟಿಸಿತು. ಇದರ ಫಲಿತವಾಗಿ ರಾಜಶ್ವವೆಲ್ಲವೂ ನಾಯವಾಯಿತು. ಇರುವ ಕೆಲವು ಬ್ರಿಟನ್ನಿನಂಥವು ನಾಮ ಮಾತ್ರವಾಗಿವೆ. ಪುರೋಗಾಮಿ ದೇಶಗಳಾದ ರಷ್ಯ, ಅಮೇರಿಕಾ, ಫ್ರಾನ್ಸು ಮೊದಲಾದ ಮುಂತಾದ ದೇಶಗಳಿಲ್ಲವುಗಳಲ್ಲಿಯೂ ಹಲಕೆಲವು ಭೇದಗಳಿದ್ದರೂ ಪ್ರಜಾರಾಜ್ಯಗಳು ಏರ್ಪಟ್ಟಿವೆ.

ಬ್ರಿಟನ್ನಿನ ಪತನವಾಗುವುದಕ್ಕೆ ಮುಂಚೆ ಭಾರತ ದೇಶವು ಅರಾಜಕೀಯವಾಗಿತ್ತು. ಬ್ರಿಟಿಷರು ಸ್ವಪ್ರಯೋಜನಕ್ಕಾಗಿ ಸಂಸ್ಥಾನಗಳನ್ನು ಕೆಲವು ಪದತ್ತುಗಳಿಗೆ ಒಡಪಡಿಸಿಕೊಂಡು ನಿಲ್ಲಿಸಿದರು. ಈಗ ಬ್ರಿಟಿಷರ ಪಾಲನೆಯು ತೊಲಗಿತು. ನಾವು ಹಿಂದೆ ಇದ್ದ ಸ್ಥಿತಿಗೆ ಹೋಗಕೂಡದು. ಹಾಗೆ ಹೋದಲ್ಲಿ ಯೂರೋಪು ರಾಷ್ಟ್ರಾದೇಶಗಳಲ್ಲಿ ನಡೆದ ಚರಿತ್ರೆಯು ಅಂದರೆ ಸಂಕ್ಷೋಭೆಗಳೂ ರಕ್ತಪಾತವೂ, ಅಶಾಂತಿಯೂ ಪುನಃ ಪ್ರಾರಂಭವಾಗುವುವು. ಹೀಗಾಗುವುದು ಎಕೆಯು ವಾಂಛನೀಯವಲ್ಲ.

ಜುನಘಡವಾಗಲೀ ಕಾಶ್ಮೀರವಾಗಲೀ ಹೈದರಾಬಾದಾಗಲೀ ಮತ್ಯಾವ ಸಂಸ್ಥಾನವಾಗಲೀ ಪ್ರಜೆಗಳ ಕೋರಿಕೆಯನ್ನು ಅನುಸರಿಸಿ, ಬಹುಸಂಖ್ಯ ಪ್ರಜೆಗಳು ತಮ್ಮ ಭವಿತವ್ಯವನ್ನೇ ತಿದ್ದಿಕೊಳ್ಳುವದು ಸಮಂಜಸವಾದದ್ದು. ಯಾವ ಪರಿಸ್ಥಿತಿಯಲ್ಲಾಗಲೀ ಕೊನೆಯು ತೀರ್ಮಾನವು ಪ್ರಜೆಗಳದೇ. ಪ್ರಜೆಗಳಿಗಾಗಿಯೇ ಪಾಲಕರಿರುವುದು. ತಮಗೆ ಅಗತ್ಯವಿಲ್ಲದ ಸರ್ಕಾರವನ್ನು ತೊಲಗಿಸಲೂ, ತಮ್ಮ ಇಷ್ಟದಂತೆ ರಾಜ್ಯಾಂಗವನ್ನು ನಿರ್ಮಾಣ ಮಾಡಿಕೊಳ್ಳಲೂ ಪ್ರಜೆಗಳಿಗೆ ಹಕ್ಕು ಇದೆ. ಈ ಸತ್ಯವನ್ನು ನಿರ್ಲಕ್ಷ ಮಾಡಿದಲ್ಲಿ ಅಗ್ನಿ ಪರ್ವತವು ಕೆರಳಿದಂತೆಯೇ ಸರಿ. (ಜ್ವಾ

ಈ ವಾರದ ಭವಿಷ್ಯ

(ಓಂ ಜೋತಿಷ್ಯರಿಂದ)

ಮೇಷ — ವ್ಯವಹಾರದಲ್ಲಿ ಲಾಭವುಂಟು.

ವೃಷಭ — ಉತ್ತಮ ಯೋಗದ ಕಾಲ. ಧರ್ಮ ಕಾರ್ಯದಲ್ಲಿ ಪ್ರವರ್ತನೆ. ವ್ಯವಹಾರದಲ್ಲಿ ವಿಘ್ನಗಳು.

ಮಿಥುನ— ಅಂತಃಕಲಹದ ಸಂಭವವಿದೆ, ಜಾಗ್ರತೆ ಅವಶ್ಯಕ. ಅನಾಹುತಗಳಿಗೆ ಅವಕಾಶ ಕೊಡಬೇಡಿ.

ಕರ್ಕಾಟಕ — ವ್ಯವಹಾರದಲ್ಲಿ ಜಯಪ್ರಾಪ್ತಿ. ಧನಲಾಭ. ಆನಂದ.

ಸಿಂಹ—ಮನಸ್ಥಾಪದ ಭಯ. ತೊಂದರೆಗಳುಂಟಾಗಬಹುದು.

ಕನ್ಯ — ಸಾಧಾರಣ ಯೋಗದಿಂದ ಕೂಡಿದ ವಾರ

ತುಲ— ದೇಹಾರೋಗ್ಯ ಕೆಡುತ್ತೆ, ಆದರೆ ಧನಲಾಭವಿದೆ.

ವೃಶ್ಚಿಕ— ವ್ಯವಹಾರದಲ್ಲಿ ವಿಶೇಷ ಸಹಾಯವಿದೆ ಮತ್ತು ಕಾರ್ಯನಿರ್ವಹಣೆಯಲ್ಲಿ ಹೆಚ್ಚು ಅನುಕೂಲ ಲಭಿಸುತ್ತೆ.

ಧನಸ್ಸು— ಖರ್ಚು ಹೆಚ್ಚು. ವ್ಯವಹಾರದಲ್ಲಿ ಸುಖಸಂತೋಷ.

ಮಕರ— ಜಯದಿಂದ ಕೂಡಿದ ವಾರ, ಶುಭಕಾರ್ಯತತ್ಪರರಾಗುವಿರಿ.

ಕುಂಭ — ಹೆಚ್ಚು ತೊಂದರೆ ಪ್ರಾಪ್ತವಾಗಬಹುದು. ಜಾಗ್ರತೆ.

ಮೀನ— ಕೆಲಸ ಹೆಚ್ಚು, ಆದರೆ ವ್ಯವಹಾರದಲ್ಲಿ ಉತ್ತಮ ಯೋಗವಿರುವಂತೆ ಕಾಣುತ್ತದೆ.

At Opera

From 24—10—47

MAD-MAN

(Tamil)

.... with —

S.Krishnan, T A Maduram

ಕಾಶ್ಮೀರಕ್ಕೆ ರಷ್ಯಾ ಸಹಾಯವೇ?

ನವದೆಹಲಿ ಅ 26— 100 ಟ್ರಕ್ಕುಗಳ ತುಂಬ ನೊಕನ ಕಸ್ಟ್ರಾಸ್ಕ್ರಗಳಿಂದ ಕೂಡಿದ ಪಾಕಿಸ್ತಾನ ಸೈನ್ಯದ ಅಫ್ರಿಡಿ ಜನರು ಕಾಶ್ಮೀರದಕ್ಕೆ ನುಗ್ಗಿ ಮುಸ್ಲಿಮೇತರರನ್ನು ವಿವಿಧ ರೀತಿಯಲ್ಲಿ ಪೀಡಿಸುತ್ತಿರುವರೆಂದೂ, ಕಾಶ್ಮೀರ ಸರಕಾರವು ಭಾರತ ಸರಕಾರದ ಸಹಾಯ ಕೇಳಿಕುವರೆಂದೂ, ಸೆಮಯಬಿದ್ದರೆ ರಷ್ಯಾ ಸಹಾಯಕೇಳುವುದೆಂದೂ ಹೇಳಲಾಗಿದೆ.

——

ಮೈಸೂರು ಅ 26— ಮೈಸೂರು ದಗರದ ಪುರಸಭೆಯ ಸದಸ್ಯರು ಸಂಸ್ಥಾನದ ನೂತನ ಸಚಿವವರ್ಯರುಗಳಿಗೆ ನಾಳೆ ಸಂಜೆ 5 ಘಂಟೆಗೆ ಪುರಸಭಾ ಭವನದಲ್ಲಿ ಸ್ವಾಗತ ಸಮಾರಂಭವನ್ನೇರ್ಪಡಿಸಿದಾರೆ.

ಮೈಸೂರು ಅ 27— ಸ್ಥಳೀಯ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಸತ್ಯಾಗ್ರಹದಲ್ಲಿ ಭಾಗವಹಿಸಿದ ಸಂಬಂಧದ ಜಮಾಖರ್ಚು ಪಟ್ಟಿಕಳಿಸಿದಾರೆ. ಒಟ್ಟು ಜಮಾ ರೂ. 339—10—0, ಖರ್ಚು ರೂ 340—11—6.

ಮೈಸೂರು ಅ 27— ನಿನ್ನೇ ದಿವಸ ಕಾಶಿಕ ಸಂಕೇತಿ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವವು ರಾ॥ ಶ್ರೀ ಡಾ॥ ಬಿ. ಕೆ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಶಿವಮೊಗ್ಗಾ ಅ 27— ನಿನ್ನೆ ಸಂಜೆ ಕೋಮುವಾರು ಗಲಭೆ ಪಡೆದು ಒಬ್ಬ ಸತ್ತನೆಂದೂ ಕೆಲವರು ಗಾಯಗೊಂಡರೆಂದೂ ತಿಳಿಯಿ ಬಂದಿದೆ. 24 ಘಂಟೆ ಕಾಲ ಕರ್ಫ್ಯೂ ವಿಧಿಸಲಾಗಿದೆ

ಕೊಲಿಂದೆಯಲ್ಲೂ ಸ್ವಲ್ಪ ಕೋಮುವಾರು ಗಲಾಟೆಯಾಗಿ ಒಬ್ಬನು ಬಂಧಿಸಲ್ಪಟ್ಟನೆಂದು ಹೇಳಲಾಗಿದೆ.

ಬೆಂಗಳೂರು ಅ 27—ಜವಾಬಾರಿ ಸರಕಾರದ ವಿಜಯೋತ್ಸವವನ್ನು ನವೆಂಬರ್ 1 ನೇ ತಾರೀಖಿನ ದಿನ ಆಚರಿಸುವಂತೆ ಕಾಂ॥ ಕಾ॥ ಸಮಿತಿಯವರು ನಿರ್ಧರಿಸಿರುವುದಾಗಿ ತಿಳಿಯಬಂದಿದೆ.

ಜುನಘಡ ರಾಜರು

ಜುನಗಢ ಸಂಸ್ಥಾನವು ಪಾಕೀಸ್ತಾನವನ್ನು ಸೇರಿಗಲಭೆ ಎಬ್ಬಿಸಿದೆ. ಇದರ ರಾಜರ ಸೂಕ್ಷ್ಮ ಪರಿಚಯವು ಪ್ರತಿಯೊಬ್ಬನಿಗಿರುವುದೂ ಒಳಿತು. ಈ ರಾಜರ ಹೆಸರು ಮಹಬತ್ ಖಾನ್. ಇವರಿಗೆ ನಾಲ್ಕು ಜನ ಹೆಂಡತಿಯರಿದ್ದಾರೆ. 18 ಮಕ್ಕಳಿದ್ದಾರೆ. ಇವರಲ್ಲಿ ನಾಯಿಗಳ ಸೈನ್ಯವೊಂದಿದೆ. ಇದರಲ್ಲಿ ಜಗತ್ತಿನ ಅತ್ಯುತ್ತಮ ಸುಮಾರು 900 ನಾಯಿಗಳಿವೆ. ಜುನಘಢ ಸಂಸ್ಥಾನದಲ್ಲಿ ಶಾಂತಿಕಾಲದಲ್ಲಿರುವ ಪೋಲೀಸು ಮತ್ತು ಸೈನ್ಯಕ್ಕಿಂತಾ ಹೆಚ್ಚಿದು. ಹತ್ತು ವರ್ಷಗಳಿಗೆ ಹಿಂದೆ ತಮ್ಮ ಪ್ರೀತಿಯ ನಾಯಿಗಳ ಲಗ್ನಕ್ಕಾಗಿ 36000 ರೂಪಾಯಿಗಳನ್ನು ಇವರು ವೆಚ್ಚ ಮಾಡಿದ್ದಾರೆ. ಇವು ನಾಯಿಗಳಿಗೆ ತಿನ್ನಲು ಬೇಕಾದ ಮೋಟಾರುಗಳ ಬಾಬಿನ ಬಿಲ್ಲಿನ ಕಡೆ 10000 ರೂಪಾಯಿಗಳನ್ನು ಮೊನ್ನೆಯಾಗಿ ಪಾವತಿ ಮಾಡಿದರಂತೆ. ನಾಯಿಗಳ ವಾಸಕ್ಕೆ ಅರಮನೆ ಕಟ್ಟಿದ್ದಾರೆ. (ಕೊ)

‡ ಕಾಶ್ಮೀರ ಪ್ರಭುತ್ವ ಭಾರತ ಪಸಾಹತಿಗೆ ಸೇರಿತು.

ಷೇಕ್ ಅಬುಲ್ಲ ನಾಯಕತ್ವದಲ್ಲಿ ತಾತ್ಕಾಲ ಸರ್ಕಾರ ರಚಿಸಲು ಕಾಶ್ಮೀರ ರಾಜರು ಒಪ್ಪಿದ್ದಾರೆ

ಜುನಾಘಡ ರಾಜರು ಕರಾಚಿಗೆ ಓಡಿ ಬೋಗಿದ್ದಾರೆ.

Woodlands

From 24—10—47

Dick Tracy vs Crime Inc.

Republic Serial in 15 Chapters

— featuring —

Ralph Byrd, Ralph Morgan

Jan Wiley, Kenneth Hurlan

Michael Owen

— Daily 3 Shows —

Woodlands

Morning Shows at 10-30

From 28—10—47 For 3 days

East of the River

starring —

John Garfield

Bremda Marshall

Edited, Printed and Published by M. S Krishna Rao at the Satyavadi Press Chamarja Agrahar Mysore.

ತಾ || 27-10-47 || ಶ್ರೀ || ನಂ. 59

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ ; ಗುಂಡ್ಕಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಶ್ರೀ ದ್ವಾರಕಾ ಪೀಠಾಧೀಶ್ವರ

ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾರಾಜ್‌ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾಸ್ವಾಮಿಗಳವರು

ಶ್ರೀ ದ್ವಾರಕಾ ಪೀಠಾಧೀಶ್ವರ ಶ್ರೀ ಜಗದ್ಗುರು ಶ್ರೀ ಶಂಕರರಾಜಾಚಾರ್ಯ ರವರ ಉತ್ತರ ಮೆಕ್ಕು ಪಶ್ಚಿಮ ಭಾರತ ದಿಗ್ವಿಜಯ ಪುಸ್ತಕವು ನಮಗೆ ಬಂದಿರುತ್ತದೆ. ಮುಳುಬಾಗಿಲು ಶ್ರೀ ಕೃಷ್ಣಾನಂದ ಮಠದಿಂದ ಇದು ಪ್ರಕಟಿಸಲ್ಪಟ್ಟಿದೆ. ಶ್ರೀ ಜಗದ್ಗುರುಗಳು ಭಾರತದ ನಾನಾ ಮುಖ್ಯ ಕ್ಷೇತ್ರಗಳಲ್ಲಿಯೂ ನಗರಗಳಲ್ಲಿಯೂ ಸಂಚಾರ ಮಾಡಿ ಅಲ್ಲಲ್ಲಿಯ ಜನಗಳಲ್ಲಿ ಧರ್ಮಜಾಗೃತಿಯನ್ನುಂಟುಮಾಡಿರುವ ವಿಷಯಗಳೆಲ್ಲಾ ಇದರಲ್ಲಿ ವಿವರಿಸಲ್ಪಟ್ಟಿದೆ. ಸಂದರ್ಭಾನುಸಾರವಾಗಿ ಶ್ರೀಗಳವರ ಛಾಯಾ ಚಿತ್ರಗಳೂ ಅಡಕವಾಗಿವೆ. ಮುದ್ರಣ ಕಟ್ಟು ಎಲ್ಲವೂ ಮನೋಹರವಾಗಿದೆ. ಅಸದೃಶ ವಿದ್ವತ್ತೆಂಬುದೂ ಧರ್ಮಪೀಠಾಧಿಪತಿಗಳೂ ಆದ ಶ್ರೀಗಳವರಿಗೆ ದೊರೆತ ಸ್ವಾಗತ ಸತ್ಕಾರಗಳೂ ದಿಗ್ವಿಜಯ ಯಾತ್ರೆಯೂ ಇದರಲ್ಲಿ ಉತ್ತಮವಾಗಿ ವರ್ಣಿತವಾಗಿವೆ. ಶ್ರೀ ಗುರುಗಳು ಅಲ್ಲಲ್ಲಿ ಮಾಡಿದ ಧರ್ಮಪ್ರಚಾರ ಭಾಷಣಗಳ ಸಾರಾಂಶ ಅಥವಾ ಮುಖ್ಯ ವಾಕ್ಯಗಳನ್ನು ಇದರಲ್ಲಿ ಉಲ್ಲೇಖಿಸಿದ್ದರೆ ಮತ್ತೂ ಉತ್ತಮವಾಗುತ್ತಿತ್ತು. ಧರ್ಮವು ವಿಕೃತಿಯನ್ನು ಹೊಂದುತ್ತಿರುವ ಈ ಕಾಲದಲ್ಲಿ ಶ್ರೀಗಳವರು ಅಪ್ರಾಂತರಾಗಿ ದುಡಿದು ಅಲ್ಲಲ್ಲಿ ಸಂಚಾರ ಮಾಡಿ ಧರ್ಮಪ್ರಚಾರ ಕಾರ್ಯವನ್ನು ನಡೆಸುತ್ತಿರುವುದು ನಿಸ್ಸಂದೇಹವಾಗಿಯೂ ಅಭಿನಂದನೀಯವು ವಂದ್ಯ ಇತ್ತರ ಗುರುಪೀಠಗವರಿಗೆ ಆದರ್ಶವು.

|| ವಿದ್ಯಾಭೂಷಣ ಪಂಡಿತ್ ಕೆ. ವಿ. ಪುಟ್ಟಪ್ಪಶಾಸ್ತ್ರಿ

ಸಾಮ್ಯವಾದಿಯೂ ಸನಾತನಧರ್ಮವೂ

(ಶ್ರೀ ನಸಂತಕುಮಾರ ಚಟ್ಟೋಪಾಧ್ಯಾಯ, ಎಂ.ಎ.)

(ಮುಂದುವರಿದುದು)

ಯಾರಿದ್ದಾದರೂ ದುಃಖವನ್ನು ದೂರ ಮಾಡಲು ಸಾಧ್ಯವಾದಲ್ಲಿ ನಾನವನ ದುಃಖವನ್ನು ದೂರ ಮಾಡಿದನೆಂಬ ಅಹಂಕಾರವು ಚಿತ್ತದಲ್ಲಿ ಇರಬಾರದು. ಈಶ್ವರನ ಇಚ್ಛೆಯಿಂದಲೇ ಆತನ ಯಂತ್ರಸ್ವರೂಪರಾಗಿ ನಾವು ಇತರರ ದುಃಖವನ್ನು ಹೋಗಲಾಡಿಸಲು ಪ್ರಯತ್ನ ಮಾಡುವುದು ಉಚಿತವಾಗಿದೆ ಭಗವಂತನು 'ಭಗವದ್ಗೀತೆ'ಯಲ್ಲಿ ಪ್ರತಿಯೊಂದು ಕರ್ಮ ಮಾಡುವಾಗ ಈ ನಿಯಮಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿರುವನು :- ಕರ್ಮದಲ್ಲಿ ಅಸಕ್ತಿಯಿಲ್ಲದಿರಬಾರದು - 'ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ' (ಆದುದರಿಂದ ಅನಾಸಕ್ತನಾಗಿ ಸರ್ವದಾ ಕರ್ತವ್ಯವಾದ ಕರ್ಮವನ್ನು ಮಾಡುತ್ತಿರು) ಕರ್ಮಫಲದಲ್ಲಿ ಅಸಕ್ತಿಯಿಲ್ಲದಿರಬೇಕು - 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' (ನಿನಗೆ ಕರ್ಮದಲ್ಲಿ ಮಾತ್ರವೇ ಅಧಿಕಾರ, ಕರ್ಮಫಲದಲ್ಲಿ ಎಂದಿಗೂ ಇಲ್ಲ) ಈ ಅಹಂಕಾರವನ್ನು ತ್ಯಜಿಸಿ ಕರ್ಮ ಮಾಡಬೇಕಾಗುವುದು, 'ನಾನು ಕರ್ಮ ಮಾಡುತ್ತೇನೆ' ಎಂಬ ಬೋಧವಿಟ್ಟುಕೊಂಡಿರಬಾರದು - 'ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ' (ಯಾವ ಮನಸ್ಸು ಅಹಂಕಾರದಿಂದ ಆವರಿಸಲ್ಪಟ್ಟಿರುವುದೋ, ಆವನು 'ನಾನೇ ಕರ್ತೃವು' ಎಂದು ತಿಳಿಯುತ್ತಾನೆ) ಈ ಇಂದ್ರಿಯಗಳನ್ನು ಸಂಯಮಕ್ಕೆ ತಂದುಕೊಂಡು ಕರ್ಮ ಮಾಡುವುದು ಉಚಿತ. - 'ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ' (ಯಾವ ವ್ಯಕ್ತಿಯು ಮನಸ್ಸಿನಿಂದ ಎಲ್ಲ ಇಂದ್ರಿಯಗಳನ್ನು ವಶಮಾಡಿಕೊಂಡು, ಅಸಕ್ತನಾಗಿ ಕರ್ತವ್ಯ ಕರ್ಮವನ್ನು ಪೂರೈಸುವನೋ ಅವನೇ ಶ್ರೇಷ್ಠ. ಕರ್ಮಯೋಗಿಯು) ಈ ಈಶ್ವರನನ್ನು ಸಂತೋಷಗೊಳಿಸುವ ಉದ್ದೇಶದಿಂದ ಕರ್ಮ ಮಾಡುವುದು ಉಚಿತ - 'ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ' (ಈಶ್ವರಾರ್ಥವಿತ್ತವಲ್ಲದ ಉದ್ದೇಶದಿಂದ ಮಾಡಿದ ಕರ್ಮವು ಬಂಧನಕ್ಕೆ ಕಾರಣವಾಗುವುದು) ಈ ಈಯೆಲ್ಲಾ ನಿಯಮಗಳನ್ನು ಗಮನದಲ್ಲಿಟ್ಟಿದ್ದು ಕರ್ಮ ಮಾಡಿದಲ್ಲಿ ಅದು ಚಿತ್ತ ಶುದ್ಧಿಗೆ ಕಾರಣವಾಗುವುದು - 'ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ' (ಯೋಗಿಗಳು ಆಸಕ್ತಿ ತ್ಯಾಗ ಮಾಡಿ ಆತ್ಮಶುದ್ಧಿಗಾಗಿ ಕರ್ಮವನ್ನು ಮಾಡುವರು)

ಪರೋಪಕಾರ ರೂಪವಾದ ಕರ್ಮವನ್ನು ಮಾಡುವಾಗಲೂ ಮೇಲೆ ಹೇಳಿದ ನಿಯಮಗಳನ್ನು ಪಾಲಿಸುತ್ತಾ ಕರ್ಮ ಮಾಡುವುದು ಉಚಿತ. ಈ ನಿಯಮಗಳನ್ನು ಪಾಲಿಸದೆ ಪರೋಪಕಾರ ಮಾಡುವುದರಿಂದ ಅನಿಷ್ಟವೊದಗುವ ಸಂಭವವಿದೆ. ಸಾಮ್ಯವಾದಿಯಾದ ರಷ್ಯಾದಲ್ಲಿ ಅದೇ ಆಗಿದೆ. ಪರೋಪಕಾರವು ಮಾನವ ಜೀವನದ ಉದ್ದೇಶ್ಯವಾಗಲಾರದು. ಅವನ ಉದ್ದೇಶ್ಯವಾಗಲಾರದು. ಅವನ ಉದ್ದೇಶ್ಯವಾದರೋ ಈಶ್ವರನ ಪ್ರಾಪ್ತಿಯಾಗಿದೆ. ಪರೋಪಕಾರ ರೂಪವಾದ ಕರ್ಮವನ್ನು ಸರಿಯಾದ ರೀತಿಯಿಂದ ಮಾಡಿದ್ದಾದರೆ, ಅದು ಉದ್ದೇಶ್ಯದ ಪೂರ್ತಿಗೆ ಸಹಾಯಕವಾಗುವುದು. ಸರಿಯಾದ ರೀತಿಯಲ್ಲಿ ಮಾಡದೇ ಹೋದಲ್ಲಿ, ಅದು ಅಂತರಾಯವಾಗುವುದು. ಲೋಕದಲ್ಲಿ ದುಃಖದ ಪರಿಮಾಣವು ಬಹಳ ಹೆಚ್ಚಿಗಿದೆ (ಅದಕ್ಕೆ ಪಾಪದ ಅಧಿಕ್ಯವು ಕಾರಣ) ಯಥಾಸಾಧ್ಯ ಪ್ರಯತ್ನ ಮಾಡಿದರೂ ಕೂಡಾ ಈ ದುಃಖದ ಪಲ್ಲ ಮಾತ್ರವೇ ಅಂಶವನ್ನು ದೂರ ಮಾಡಬಹುದಾಗಿದೆ. ದುಃಖಮೋಚನ ರೂಪವಾದ ಕರ್ಮಫಲದಲ್ಲಿ ಒಂದು ವೇಳೆ ಆಸಕ್ತಿಯಾದಲ್ಲಿ ಅಶಾಂತಿಯನ್ನಾಸ್ತಿಕತೆಯನ್ನೂ ಬರುವ ಸಂಭವವಿರುತ್ತದೆ. ಪ್ರಯತ್ನ ಮಾಡಿಯೂ ಪೃಥ್ವಿಯ ಇನ್ನು ಅಧಿಕ ದುಃಖದಲ್ಲಿ ನಾವು ಬಹಳ ಸ್ವಲ್ಪವನ್ನೇ ಹೋಗಲಾಡಿಸಬಲ್ಲೆವೆಂಬ ದಿನ ಯಾವಾಗ ಯೋಚಿಸಿ ಪರೋಪಕಾರದಿಂದ ವಿರಕ್ತರಾಗಿ ಯಾವ ಸಚ್ಚೇಷ್ಟೆಗೂ ಕೈ ತುಕೊಳ್ಳುವುದು ತಕ್ಕದಲ್ಲ. ಹೊಂದುಃಖವನ್ನು ತಪ್ಪಿಸಲು ಎಲ್ಲರೂ ಪ್ರಯತ್ನ ಮಾಡಬೇಕು. ಅದರೆ ಈ ಚೇಷ್ಟೆಗೆ ಆತ್ಮಶುದ್ಧಿಯೇ ಉದ್ದೇಶ್ಯವಾಗುವುದು || ಸಶೇಷ

ಗೋ ವಧೆ ನಿಲ್ಲಲಿ